| Deposition Sheets (RP.No.57) Form No.4 (Civil) |
|---|

IN THE COURT OF CIVIL JUDGE & J.M.F.C., KARKALA.

Criminal Case No. 1251/22

..................................................Vs...................................

ಸಾಕ್ಷಿದಾರಳ ಹೆಸರು ಃ ಸಂಗೀತಾ ಪಿ.ಡಬ್ಲ್ಯೂಃ 14

ಗಂಡನ ಹೆಸರುಃ ರಮೇಶ್ ಸಿ.ಡಬ್ಲ್ಯೂಃ 12

ಪ್ರಾಯ ಃ 32 ವರ್ಷ

ಉದ್ಯೋಗ ಃ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ, ಇರ್ವತ್ತೂರು

ವಾಸ ಃ ಕಾರ್ಕಳ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 03-07-2024

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು ದಿಃ 15-12-2018 ರಿಂದ ಇಲ್ಲಿಯವರೆಗೆ ಇರ್ವತ್ತೂರು ಸರ್ಕಾರಿ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ನನಗೆ 3 ಮತ್ತು 4 ನೇ ಆರೋಪಿತರ ಪರಿಚಯ ಇರುತ್ತದೆ. ನಾನು ಆಸ್ಪತ್ರೆಗೆ ಮನೆ ಸರ್ವೇಗೆ ಹೋಗಿದ್ದಾಗ 4 ನೇ ಆರೋಪಿಯು ಗರ್ಭಿಣಿ ಎಂದು ಗೊತ್ತಾಗಿರುತ್ತದೆ. ಸರ್ಕಾರಿ ಯೋಜನೆಯ ಅನುಸಾರ ಆಕೆಗೆ ತಾಯಿ ಕಾರ್ಡ್ ಕೊಡಲು ಸಾಣೂರಿನ ಅವರ ಮನೆಗೆ ಹೋದಾಗ ಆಕೆಯು ಅಜೆಕಾರಿನಲ್ಲಿರುವ ತಮ್ಮ ಇನ್ನೊಂದು ಮನೆಯಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿರುತ್ತಾರೆ. 1 ವಾರದ ನಂತರ ಪುನಃ ಸಾಣೂರಿಗೆ ಹೋಗಿದ್ದು ಅಲ್ಲಿ 3 ನೇ ಆರೋಪಿ ಸಿಕ್ಕಿರುವುದಿಲ್ಲ.

1 ತಿಂಗಳ ನಂತರ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಲು ಹೋದಾಗ 3 ನೇ ಆರೋಪಿಯ ಪಕ್ಕದ ಮನೆಯವರು ಆಕೆಗೆ ಹೆರಿಗೆಯಾಗಿದೆ ಎಂದು ತಿಳಿಸಿರುತ್ತಾರೆ.

ಅದನ್ನು ಹೊರತು ಪಡಿಸಿ ಬೇರೆ ವಿಷಯಗಳು ಗೊತ್ತಿರುವುದಿಲ್ಲ. ಈ ಕುರಿತು ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರು:-</u>

ಈಗ ನನಗೆ ಓದಿ ಹೇಳಿದಂತೆ ದಿಃ 11-08-2021 ರಂದು ನಾನು ಪೋಲಿಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ 1 ರಿಂದ 4 ನೇ ಆರೋಪಿತರ ಪರಃ ಶ್ರೀ ಹೆಚ್ ಆರ್ ಕೆ ವಕೀಲರಿಂದಃ</u>

ನನ್ನನ್ನು ಪೋಲಿಸರು ಠಾಣೆಗೆ ಕರೆದಿರುವುದಿಲ್ಲ. ಠಾಣೆಯಲ್ಲಿ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ. ಪೋಲಿಸರು ದೂರವಾಣಿ ಕರೆ ಮೂಲಕ ಪ್ರಕರಣ ಕುರಿತು ನನ್ನನ್ನು ವಿಚಾರಿಸಿರುತ್ತಾರೆ. ಸದರಿ ದಿನ ದೂರವಾಣಿ ಮೂಲಕ ನಾನು ನೀಡಿದ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ. 3 ನೇ ಆರೋಪಿಗೆ ಮಗು ಜನಸಿದ ಬಗ್ಗೆ ಮಾತ್ರ ನಾನು ಹೇಳಿರುತ್ತೇನೆ ಅದನ್ನು ಹೊರತು ಪಡಿಸಿ ಬೇರೆ ಏನೂ ಹೇಳಿರುವುದಿಲ್ಲ. ನಾನು ದಿಃ 11-08-2021 ರಂದು ಪೋಲಿಸರ ಮುಂದೆ ನೀಡಿದ್ದೇನೆ ಎಂದು ಹೇಳುವ ಹೇಳಿಕೆ ನಾನು ನೀಡಿದ್ದಾಗಿರುವುದಿಲ್ಲ.

<u>ಪಾಟೀ ಸವಾಲುಃ **5** ನೇ ಆರೋಪಿ ಪರಃ ಶ್ರೀ ಎನ್ ಬಿ ಎ ವಕೀಲರಿಂದಃ ಏನೂ ಇಲ್ಲ**.**</u>

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ